ಸಮಗ್ರ ಶಿಕ್ಷಣ ಕರ್ನಾಟಕ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು-560001**

ಸಶಿಕ/ಆಚ/ಸ್ವ.ದಿ-1/2026/E- 107707 ದಿನಾಂಕ: 16-06-2026

## ಸುತ್ತೋಲೆ

| | |
|---|---|
| **ವಿಷಯ:** | ಸ್ವಾತಂತ್ರ್ಯ ದಿನಾಚರಣೆ – 2026ರ ಅಂಗವಾಗಿ MyGov ಮತ್ತು MY Bharat ಪೋರ್ಟಲ್‌ಗಳಲ್ಲಿ ದಿನಾಂಕ:01/06/2 0 2 6 ರಿಂದ 15/07/2026 ರವರೆಗೆ ಆಯೋಜಿಸಲಾಗುತ್ತಿರುವ ವಿವಿಧ ಸ್ಪರ್ಧೆಗಳು/ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಕುರಿತು. |
| **ಉಲ್ಲೇಖ:** | MoE ರವರ ಪತ್ರ ಸಂಖ್ಯೆ: F.No.17-19/2026-Coord Dated: 04-06-2026 ಮತ್ತು 11-06-2026. |

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸ್ವಾತಂತ್ರ್ಯ ದಿನಾಚರಣೆ – 2026ರ ಅಂಗವಾಗಿ, ರಕ್ಷಣಾ ಸಚಿವಾಲಯವು (Ministry of Defence) MyGov ಮತ್ತು MY Bharat ಸಹಯೋಗದೊಂದಿಗೆ 01/06/2026 ರಿಂದ 15/07/2026 ರವರೆಗೆ ವಿವಿಧ ಆನ್‌ಲೈನ್ ಸ್ಪರ್ಧೆಗಳು ಹಾಗೂ ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಕ್ರಮವಹಿಸುವಂತೆ ತಿಳಿಸಿದೆ. ಇದರ ವಿವರಗಳು ಅನುಬಂಧ – ಎ (Appendix A) ಯಲ್ಲಿ ನೀಡಲಾಗಿದೆ

ಎಲ್ಲಾ ಶಾಲಾ / ಕಾಲೇಜುಗಳಿಗೆ ಈ ಸ್ಪರ್ಧೆಗಳು ಮತ್ತು ಚಟುವಟಿಕೆಗಳ ಕುರಿತು ವ್ಯಾಪಕ ಪ್ರಚಾರವನ್ನು ನೀಡುವಂತೆ ತಿಳಿಸಿದೆ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಉತ್ತೇಜಿಸಿ ಹಾಗೂ ಶಾಲಾ / ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಮತ್ತು ರಾಷ್ಟ್ರಪ್ರೇಮದ ಭಾವನೆಯನ್ನು ಬೆಳೆಸಲು ಉಪನಿರ್ದೇಶಕರು (ಆಡಳಿತ) ರವರು ತಮ್ಮ ಹಂತದಲ್ಲಿ ಸುತ್ತೋಲೆಯನ್ನು ಹೊರಡಿಸಿ ಕ್ರಮವಹಿಸುವಂತೆ ತಿಳಿಸಿದೆ.

1. **ಪ್ರಬಂಧ ಸ್ಪರ್ಧೆ**

ಸ್ವಾತಂತ್ರ್ಯ ದಿನಾಚರಣೆ–2026ರ ಅಂಗವಾಗಿ, ರಕ್ಷಣಾ ಸಚಿವಾಲಯವು MyGov ಮತ್ತು MyBharat ಸಹಯೋಗದೊಂದಿಗೆ 01.06.2026 ರಿಂದ 15/07/2026 ರವರೆಗೆ "2047ರೊಳಗೆ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣದಲ್ಲಿ ಕೃತಕ ಬುದ್ಧಿಮತ್ತೆ (AI) ಯ ಪಾತ್ರ"ಎಂಬ ವಿಷಯದ ಮೇಲೆ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿದೆ. ಈ ಸ್ಪರ್ಧೆಯ ಉದ್ದೇಶ ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರಲ್ಲಿ 2047ರೊಳಗೆ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣದಲ್ಲಿ AIಯ ಮಹತ್ವದ ಪಾತ್ರದ ಬಗ್ಗೆ ಜಾಗೃತಿ ಮೂಡಿಸುವುದಾಗಿದೆ.

**ಪ್ರಮುಖ ಅಂಶಗಳು**:

i. ಸ್ಪರ್ಧೆಯಲ್ಲಿ ಭಾಗವಹಿಸುವವರು "2047 ರೊಳಗೆ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣದಲ್ಲಿ AIಯ ಪಾತ್ರ" ಎಂಬ ವಿಷಯದ ಕುರಿತು ಸುಮಾರು 500–600 ಪದಗಳಲ್ಲಿ ಅದರ ಸಾರವನ್ನು ಒಳಗೊಂಡಂತೆ ಪ್ರಬಂಧ ಬರೆಯಬೇಕು.
ii. ಆಯ್ಕೆಯಾದ ಮೊದಲ ಮೂರು ವಿಜೇತರಿಗೆ ತಲಾ ₹15,000/- ನಗದು ಬಹುಮಾನ ನೀಡಲಾಗುತ್ತದೆ.
iii. ಆಯ್ಕೆಯಾದ ಮೊದಲ 200 ಭಾಗವಹಿಸಿದವರಿಗೆ ಅವರೊಂದಿಗೆ ಒಬ್ಬ ಸಹಚರ (ಪಾಲಕರು) ಸೇರಿದಂತೆ, 2026ರ ಆಗಸ್ಟ್ 15ರಂದು ದೆಹಲಿಯ Red Fort ನಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯನ್ನು ವೀಕ್ಷಿಸಲು ಇ-ಆಹ್ವಾನ ಪತ್ರಿಕೆ (e-Invitation) ನೀಡಲಾಗುತ್ತದೆ.

2. **ಚಿತ್ರಕಲೆ (Painting) ಸ್ಪರ್ಧೆ**

ಸ್ವಾತಂತ್ರ್ಯ ದಿನಾಚರಣೆ–2026ರ ಅಂಗವಾಗಿ, ರಕ್ಷಣಾ ಸಚಿವಾಲಯವು MyGov ಮತ್ತು MyBharat ಸಹಯೋಗದೊಂದಿಗೆ 01.06.2026 ರಿಂದ 15.07.2026 ರವರೆಗೆ “ಭಾರತ 1947 ರಿಂದ ಭಾರತ 2047" ಎಂಬ ವಿಷಯದ ಮೇಲೆ ಚಿತ್ರಕಲೆ ((Painting)) ಸ್ಪರ್ಧೆಯನ್ನು ಆಯೋಜಿಸಿದೆ.ಈ ಸ್ಪರ್ಧೆಯ ಉದ್ದೇಶ ನಮ್ಮ ರಾಷ್ಟ್ರದ ವಿವಿಧ ಪ್ರಮುಖ ಕ್ಷೇತ್ರಗಳಲ್ಲಿ ಇತ್ತೀಚಿನ ಬೆಳವಣಿಗೆಗಳು ಮತ್ತು ಸಾಧನೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದಾಗಿದೆ.

**ಪ್ರಮುಖ ಅಂಶಗಳು:**

i. ಭಾಗವಹಿಸುವವರು "ಭಾರತ 1947 ರಿಂದ ಭಾರತ 2047" ಎಂಬ ವಿಷಯದ ಮೇಲೆ ಭಾರತದ ಅಭಿವೃದ್ಧಿ ಮತ್ತು ಸಾಧನೆಗಳನ್ನು ತೋರಿಸುವ ಚಿತ್ರಗಳನ್ನು ರಚಿಸಿ ಪ್ರದರ್ಶಿಸಬೇಕು.
ii. ಆಯ್ಕೆಯಾದ ಮೊದಲ ಮೂರು ವಿಜೇತರಿಗೆ ತಲಾ ₹15,000/- ನಗದು ಬಹುಮಾನ ನೀಡಲಾಗುತ್ತದೆ.
iii. ಇದಲ್ಲದೆ 20 ಸಮಾಧಾನಕರ ಬಹುಮಾನಗಳನ್ನು ನೀಡಲಾಗುತ್ತದೆ. ಪ್ರತಿಯೊಂದು ಸಮಾಧಾನಕರ ಬಹುಮಾನದ ಮೊತ್ತ

₹5000/- ಆಗಿರುತ್ತದೆ.

iv. ಆಯ್ಕೆಯಾದ ಮೊದಲ 200 ಭಾಗವಹಿಸಿದವರಿಗೆ ಅವರೊಂದಿಗೆ ಒಬ್ಬ ಸಹಚರ (ಪಾಲಕರು) ಸೇರಿದಂತೆ, 15.08.2026ರಂದು Red Fort ನಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯನ್ನು ವೀಕ್ಷಿಸಲು ಇ-ಆಹ್ವಾನ ಪತ್ರಿಕೆ (e-Invitation) ನೀಡಲಾಗುತ್ತದೆ.

3. **<u>ವಿವಿಧ ವಿಷಯಗಳ ಕುರಿತು ಆನ್‌ಲೈನ್ ರಸಪ್ರಶ್ನೆ (ಕ್ವಿಜ್) ಸ್ಪರ್ಧೆಗಳ ಸರಣಿ</u>**

ಸ್ವಾತಂತ್ರ್ಯ ದಿನಾಚರಣೆ–2026ರ ಅಂಗವಾಗಿ, ರಕ್ಷಣಾ ಸಚಿವಾಲಯವು MyGov ಮತ್ತು MyBharat ಸಹಯೋಗದೊಂದಿಗೆ 10/06/2026 ರಿಂದ 15/07/2026ರವರೆಗೆ ಕೆಳಕಂಡ ವಿಷಯಗಳ ಕುರಿತು online ರಸಪ್ರಶ್ನೆ (Quiz) ಸ್ಪರ್ಧೆಗಳ ಸರಣಿಯನ್ನು ಆಯೋಜಿಸಿದೆ. ಈ ಸ್ಪರ್ಧೆಗಳ ಉದ್ದೇಶ ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರಲ್ಲಿ ದೇಶಭಕ್ತಿ ಭಾವನೆಯನ್ನು ಉತ್ತೇಜಿಸುವುದು ಹಾಗೂ ರಾಷ್ಟ್ರಪ್ರೇಮವನ್ನು ಬೆಳೆಸುವುದಾಗಿದೆ.

| ಕ್ರ.ಸಂ | ವಿಷಯಗಳು | ಸಮಯ |
|---|---|---|
| 1 | ಭಾರತದ ಸಂವಿಧಾನ – ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ಪ್ರಮುಖ ವಿಧಿಗಳು (Articles) ಹಾಗೂ ಸಂವಿಧಾನ ರಚನಾಕಾರರು. | 10/06/2026 ರಿಂದ 15/07/2026 |
| 2 | ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ – ಶ್ರೀಮತಿ ರಾಣಿ ಲಕ್ಷ್ಮೀಬಾಯಿ ಯಿಂದ ಶ್ರೀಮತಿ ಸರೋಜಿನಿ ನಾಯ್ಡು ರವರೆಗೆ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ ನೀಡಿದ ಮಹಿಳೆಯರ ಸಾಧನೆಗಳು ಮತ್ತು ಪಾತ್ರ. | |
| 3 | ಆಧುನಿಕ ಭಾರತದ ಪ್ರಮುಖ ಮೈಲಿಗಲ್ಲುಗಳು:<br>ತಂತ್ರಜ್ಞಾನ ಕ್ಷೇತ್ರದಲ್ಲಿನ ಪ್ರಗತಿ ಮತ್ತು ಸಾಧನೆಗಳು<br>ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿನ ಅಭಿವೃದ್ಧಿ ಹಾಗೂ ಗಮನಾರ್ಹ ಸಾಧನೆಗಳು | |
| 4 | ಪರಮಾಣು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಯಶಸ್ವಿನ ಪಯಣ" | |

**<u>ಪ್ರಮುಖ ಅಂಶಗಳು</u>**

i. ಪ್ರತಿ ರಸಪ್ರಶ್ನೆ (ಕ್ವಿಜ್) ಸ್ಪರ್ಧೆಗಳು ದ್ವಿಭಾಷೀಯ ಸ್ವರೂಪದಲ್ಲಿರುತ್ತದೆ, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಇರುತ್ತದೆ.

ii. ಪ್ರತಿ ರಸಪ್ರಶ್ನೆ (ಕ್ವಿಜ್) ಸ್ಪರ್ಧೆಗಳ ಅವಧಿ 5 ನಿಮಿಷಗಳು (300 ಸೆಕೆಂಡುಗಳು) ಆಗಿದ್ದು, ಆ ಅವಧಿಯಲ್ಲಿ ಗರಿಷ್ಠ 20 ಪ್ರಶ್ನೆಗಳಿಗೆ ಉತ್ತರಿಸಲು ಅವಕಾಶ ಇರುತ್ತದೆ.

iii. ಸ್ಪರ್ಧೆಯ ವಿಜೇತರನ್ನು ಮೇಲ್ಕಂಡ ಎಲ್ಲಾ ರಸಪ್ರಶ್ನೆ (ಕ್ವಿಜ್) ಸ್ಪರ್ಧೆಗಳಲ್ಲಿ ನೀಡಿದ ಒಟ್ಟು ಉತ್ತರಗಳು ಮತ್ತು ತೆಗೆದುಕೊಳ್ಳುವ ಸಮಯ (ಕಾರ್ಯಕ್ಷಮತೆ)ದ ಆಧಾರದ ಮೇಲೆ ಘೋಷಿಸಲಾಗುತ್ತದೆ. ಆದರೆ, ಭಾಗವಹಿಸುವವರಿಗೆ ಯಾವುದೇ ಹಂತವಾರು ಹೊರಗುಳಿಯದಂತೆ ಎಲ್ಲಾ ಕ್ವಿಜ್‌ಗಳಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ.

iv. ಆಯ್ಕೆಯಾದ ಮೊದಲ ಮೂರು ವಿಜೇತರಿಗೆ ತಲಾ ರೂ.15,000/- ನಗದು ಬಹುಮಾನ ನೀಡಲಾಗುತ್ತದೆ.

v. ಇದಲ್ಲದೆ 50 ಸಮಾಧಾನಕರ ಬಹುಮಾನಗಳನ್ನು ನೀಡಲಾಗುತ್ತದೆ. ಪ್ರತಿಯೊಂದು ಸಮಾಧಾನಕರ ಬಹುಮಾನದ ಮೊತ್ತ ರೂ.5,000/- ಆಗಿರುತ್ತದೆ.

vi. ಆಯ್ಕೆಯಾದ ಅಗ್ರ 200 ಭಾಗವಹಿಸಿದವರಿಗೆ ಅವರೊಂದಿಗೆ ಒಬ್ಬ ಸಹಚರ (ಪಾಲಕರು) ಸೇರಿದಂತೆ, 15.08.2026 Red Fort ನಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯನ್ನು ವೀಕ್ಷಿಸಲು ಇ-ಆಹ್ವಾನ ಪತ್ರಿಕೆ ನೀಡಲಾಗುತ್ತದೆ.

vii. ಎಲ್ಲಾ ಕ್ವಿಜ್ ಭಾಗವಹಿಸಿದವರಿಗೆ MyGov.in ಮೂಲಕ ಆನ್‌ಲೈನ್ ಪ್ರಮಾಣಪತ್ರ (certificate of participation) ನೀಡಲಾಗುತ್ತದೆ.

**<u>ಷರತ್ತು ಮತ್ತು ನಿಯಮಗಳು:-</u>**

1. ಭಾಗವಹಿಸುವವರು ಭಾರತದ ನಾಗರಿಕರಾಗಿರಬೇಕು..
2. ಪ್ರಬಂಧ ಸಲ್ಲಿಕೆಗಳು ದ್ವಿಭಾಷೀಯವಾಗಿದ್ದು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇರಬೇಕು.
3. ಒಬ್ಬ ವಿದ್ಯಾರ್ಥಿಯು ಕೇವಲ ಒಮ್ಮೆ ಮಾತ್ರ ಭಾಗವಹಿಸಬಹುದು
4. ಆಯ್ಕೆಯಾದ ಅಗ್ರ 200 ಭಾಗವಹಿಸುವವರಿಗೆ, ಅವರೊಂದಿಗೆ ಒಬ್ಬ ಸಹಚರ (ಪಾಲಕರು/ಪತಿ ಅಥವಾ ಪತ್ನಿ/ಸಂಬಂಧಿಕರು ಇತ್ಯಾದಿ) ಸೇರಿದಂತೆ, 2026ರ ಸ್ವಾತಂತ್ರ್ಯ ದಿನಾಚರಣೆಯನ್ನು ವೀಕ್ಷಿಸಲು Red Fort ನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಇ-ಆಹ್ವಾನ ಪತ್ರಿಕೆ ನೀಡಲಾಗುತ್ತದೆ.
5. 2026ರ ಸ್ವಾತಂತ್ರ್ಯ ದಿನಾಚರಣೆಗೆ Red Fort, ನವದೆಹಲಿಯಲ್ಲಿ ಇ-ಆಹ್ವಾನ ಪತ್ರಿಕೆ ಪಡೆಯಲು ಆಯ್ಕೆಯಾದ ಅಗ್ರ 200 ಭಾಗವಹಿಸುವವರು, ತಮ್ಮ ಹಾಗೂ ತಮ್ಮೊಂದಿಗಿನ ಒಬ್ಬ ಸಹಚರರ (ಪಾಲಕರು) ಕುರಿತು ಮಾಹಿತಿಗಳನ್ನು ಒದಗಿಸಬೇಕಾಗುತ್ತದೆ.
6. 2026ರ ಆಗಸ್ಟ್ 15ರಂದು Red Fort ನಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯನ್ನು ವೀಕ್ಷಿಸಲು ದೆಹಲಿ ಪ್ರವಾಸಕ್ಕೆ ಸಂಬಂಧಿಸಿದ ಪ್ರಯಾಣ, ವಸತಿ, ಆಹಾರ ಹಾಗೂ ಇತರೆ ಎಲ್ಲಾ ವೆಚ್ಚಗಳನ್ನು ಭಾಗವಹಿಸುವ ವ್ಯಕ್ತಿಯೇ ಸ್ವತಃ ಭರಿಸಬೇಕಾಗುತ್ತದೆ ಎಂಬುದನ್ನು ಗಮನಿಸಬೇಕು.

ಈ ಸಂಬಂಧ ಉಪನಿರ್ದೇಶಕರು (ಆಡಳಿತ) ರವರು ಸುತ್ತೋಲೆಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ ಎಲ್ಲಾ ಶಾಲಾ /

ಕಾಲೇಜುಗಳ ಮುಖ್ಯಸ್ಥರಿಗೆ ತಲುಪಿಸಿ ಕೈಗೊಂಡಿರುವ ಕ್ರಮಗಳ ಕುರಿತು ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಕಛೇರಿಯ ಈ-ಮೇಲ್ : ssknasinn@gmail.com ಮಾಹಿತಿಯನ್ನು **ದಿನಾಂಕ:19.06.2026ರ** ಒಳಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.

(MyGov ಮತ್ತು MY Bharat ಪೋರ್ಟಲ್‌ಗಳಲ್ಲಿ ಸ್ಪರ್ಧೆಗಳು/ಚಟುವಟಿಕೆಗಳ ಪ್ರಮುಖ ಅಂಶಗಳು ಹಾಗೂ ನಿಯಮ ಮತ್ತು ಷರತ್ತುಗಳನ್ನೂ ಹೊಂದಿರುವ MoE ರವರ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ.)

Digitally signed by
K VIDYA KUMARI
Date: 17-06-2026
11:00:08

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು

ಅಗತ್ಯ ಕ್ರಮಕ್ಕಾಗಿ

1. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು. ಸಮಗ್ರ ಶಿಕ್ಷಣ ಕರ್ನಾಟಕ ರವರು ಸಿದ್ಧಪಡಿಸಿದ ಸುತ್ತೋಲೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಕಳುಹಿಸುವುದು.

ಮಾಹಿತಿಗಾಗಿ

1. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ ಆರ್ ಸರ್ಕಲ್, ಬೆಂಗಳೂರು-560001
2. ನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
3. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ವಿಭಾಗ